( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ **10/03/2020**

**ಅಸಲು ದಾವೆ.ನಂ. 180/2009**

ಪಿ.ಡಬ್ಲ್ಯೂ 1

( ಪಾಟೀ ಸವಾಲುಃ ಶ್ರೀ ಸಿ.ವಿ.ಎನ್. ವಕೀಲರಿಂದಃ )

ನಾನು ಕ್ರಯಕ್ಕೆ ಪಡೆದಿರು ನಿವೇಶನದ ಸಂಖ್ಯೆ 121. ನಾನು ರಾಮನಾಥಪುರದ ಗ್ರಾಮ ಪಂಚಾಯಿತಿಯಲ್ಲಿ 1994 ರಿಂದ 99 ರವರೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿದ್ದೇನು. ಆ ಸಮಯದಲ್ಲಿ 5-6 ಜನ ಕಾರ್ಯದರ್ಶಿಗಳಾಗಿದ್ದರು. ಅವರುಗಳು ಪೈಕಿ ಒಬ್ಬರು ಶಿವೇಗೌಡ ಉಳಿದವರ ಹೆಸರು ನೆನಪಿಲ್ಲ. ನನ್ನ ಅಧಿಕಾರವಧಿಯಲ್ಲಿ ಯಾವುದೇ ನಿವೇಶನದ ಹಕ್ಕು ಪತ್ರ ನೀಡಿಲ್ಲ ಏಕೆಂದರೆ ಸರ್ಕಾರವೇ ಅದನ್ನು ರದ್ದುಗೊಳಿಸಿತ್ತು.

ನಾನು ಖರೀದಿ ಮಾಡಿರುವ ನಿವೇಶನ ಪೂರ್ವಕ್ಕೆ ಪಂಚಾಯಿತಿ ರಸ್ತೆ , ಪಶ್ಚಿಮಕ್ಕೆ ಪಂಚಾಯಿತಿ ಕಚೇರಿ, ಉತ್ತರಕ್ಕೆ ಶಾಮಯ್ಯಂಗಾರ್ ರವರ ಮನೆ ದಕ್ಷಿಣಕ್ಕೆ ಕೆ.ಇ.ಬಿ. ನಿವೇಶನ. ನಾನು ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿದ್ದಾಗ ಹಿಂದಿನ ಮಂಡಲ ಪಂಚಾಯಿತಿ ಅಧ್ಯಕ್ಷರಾದ ವಿಶ್ವನಾಥ್ ರವರು 1994 ರಲ್ಲಿ

ಜೀವಂತವಾಗಿದ್ದರು. ನಾನು ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿದ್ದಾಗ ಸ್ವಾಮಿ ಎಂಬುವವರು ಕಾರ್ಯದರ್ಶಿಯಾಗಿ ಕರ್ತವ್ಯವನ್ನು ನಿರ್ವಹಿಸಿಲ್ಲ ಹಿಂದೆ ನಿರ್ವಹಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ಅಧ್ಯಕ್ಷನಾಗುವ ಮುಂಚೆ ರಾಮನಾಥಪುರ ಗ್ರಾಮ ಪಂಚಾಯಿತಿ ಮಂಡಲ ಪಂಚಾಯಿತಿ ಎಂದು ಇದ್ದು, ಅದಕ್ಕೂ ಮೊದಲು ಗ್ರೂಪ್ ಪಂಚಾಯಿತಿ ಆಗಿತ್ತು. ವಿಶ್ವನಾಥ್ ರವರು ಮಂಡಲ ಪಂಚಾಯಿತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಗ್ರೂಪ್ ಪಂಚಾಯಿತಿ ಇದ್ದ ಸಮಯದಲ್ಲಿ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಳ್ಳಲು ನಿವೇಶನ ಮಂಜೂರು ಮಾಡುತ್ತಿದ್ದರು. ನಿವೇಶನಗಳ ಹಕ್ಕು ಪತ್ರದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಬೇಕು ಬೇರೆಯಾರಿಗೆ ಪರಬಾರೆ ಮಾಡಬಾರದುಎಂದು ಷರತ್ತು ಇರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಿವೇಶನಗಳ ಹಂಚಿಕೆ ನನ್ನ ಅಧಿಕಾರಾವಧಿಯ ಮುಂಚೆ ಅಧಿಕಾರಾವಧಿಯಲ್ಲಿ ಮತ್ತು ಅಧಿಕಾರಾವಧಿಯ ನಂತರದಲ್ಲಿ ಇತ್ತು ಎಂದರೆ ಸರಿಯಲ್ಲ. ನಿವೇಶನಗಳ ಹಂಚಿಕೆಗಾಗಿ ನಮ್ಮ ಕಚೇರಿಯಲ್ಲಿ ಹಕ್ಕು ಪತ್ರದ ಖಾಲಿ ಫಾರಂಗಳನ್ನು ಇಟ್ಟುಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಅಧ್ಯಕ್ಷನಾಗಿದ್ದ ಸಮಯದಲ್ಲಿ ಹುಚ್ಚೇಗೌಡರ ಹೆಸರಿಗೆ ಖಾಲಿ ಹಕ್ಕು ಪತ್ರವನ್ನು ತೆಗೆದುಕೊಂಡು ಹುಚ್ಚೇಗೌಡರ ಹೆಸರನ್ನು ನಮೂದಿಸಿ ಹಿಂದಿನ ಅಧ್ಯಕ್ಷರ ಅವಧಿಯ ದಿನಾಂಕವನ್ನು ನಮೂದಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ-2 ರ ಅಸಲು ಪ್ರತಿ ಏನಾಯಿತು ಎಂದು ನೆನಪಿಲ್ಲ. ನಿಡಿ-2 ರ ಅಸಲು ಪ್ರತಿಯನ್ನು ಹಾಜರು ಪಡಿಸಿದರೆ ಸತ್ಯಾಂಶ ಹೊರಬರುತ್ತದೆ ಎಂದು ನಾನು ಅಸಲು ಪ್ರತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಮೂಡ್ಲಿಗಿರಿಗೌಡ ಎಂಬ ಛೇರ್ಮನ್ ರವರು ಸಹಿ ಮಾಡಿರುತ್ತಾರೆ. ನಿಡಿ-2 ರಲ್ಲಿರುವ ಸಹಿ ಮೂಡ್ಲಿಗಿರಿಗೌಡರವರದ್ದಲ್ಲ ಎಂದು ಅಸಲು ದಾವಾ ನಂಃ 215/1999 ರಲ್ಲಿ ರುಜುವಾತಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಬಾಕಿ ಇರುವುದಾಗಿ ನುಡಿಯುತ್ತಾರೆ.

ನಿಡಿ-24 ರಲ್ಲಿ ಡಿಕ್ರಿ ಪ್ರತಿಯನ್ನು ಹಾಜರು ಪಡಿಸಿದ್ದು, ತೀರ್ಪಿನ ಪ್ರತಿಯನ್ನು ಹಾಜರು ಪಡಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಅದನ್ನು ತನ್ನ ವಕೀಲರಿಗೆ ನೀಡಿದ್ದಾಗಿ ನುಡಿಯುತ್ತಾರೆ. ಸಾಕ್ಷಿಗೆ ಅಸಲು ದಾವಾ ನಂಃ 215/1999 ತೀರ್ಪಿನ ದೃಡೀಕೃತ ನಕಲನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**